ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ

ದಿನಾಂಕಃ 21.07.2026 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಮ್ ಪಿ ವಿ ವಕೀಲರಿಂದಃ**

7. ದಾವಾ ಆಸ್ತಿಗಳನ್ನು ನನ್ನ ಮುತ್ತಜ್ಜಿ ಚೆನ್ನವ್ವ ಖರೀದಿ ಮಾಡಿದ್ದರು. ನನ್ನ ಅಜ್ಜ ಶಂಕರೆಪ್ಪ ಪಂಚಾಯತಿ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರು ತಮ್ಮ ಆದಾಯದಿಂದ ದಾವಾ ಆಸ್ತಿಯ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನ ಅಜ್ಜನಿಗೆ ಕೆಲಸ ಇರಲಿಲ್ಲ. 1992 ರಲ್ಲಿ ಕೆಲವು ಆಸ್ತಿಗಳನ್ನು ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ವಾಟನಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

8. 1987 ರಲ್ಲಿ ಚೆನ್ನವ್ವ ಅ ಅನುಸೂಚಿ ಆಸ್ತಿಯನ್ನು ಖರೀದಿ ಮಾಡಿರುತ್ತಾಳೆ ಎಂದರೆ ಸರಿ. ಸದರಿ ನನ್ನ ಅಜ್ಜಿ ತೀರಿಕೊಂಡ ನಂತರ ಶಂಕರೆಪ್ಪನ ಹೆಸರಿನಲ್ಲಿ ದಾಖಲೆಗಳು ಮುಂದುವರೆದಿದ್ದವು ಎಂದರೆ ಸರಿ. 2 ನೇ ಪ್ರತಿವಾದಿ ಸೈನಿಕನಾಗಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿ. ದಿನಾಂಕ 01.12.2013 ರಂದು ನನ್ನ ತಾಯಿಯ ಬಳಗ ಮತ್ತು ಇತರರು ನನ್ನ ಅಜ್ಜ-ಅಜ್ಜಿಗೆ ತೊಂದೆರ ಕೊಟ್ಟರು ಎಂದು ಪೋಲಿಸ ಠಾಣೆಯಲ್ಲಿ ದೂರು ಕೊಟ್ಟರು ಎಂದರೆ ಸರಿಯಲ್ಲ.

9. ನನ್ನ ತಾಯಿ ಮದುವೆಯಾಗಿ 2009 ನೇ ಸಾಲಿನಲ್ಲಿ ನಾನು 3 ನೇ ತರಗತಿ ಇದ್ದಾಗ ಬಿಟ್ಟು ಹೋಗಿರುತ್ತಾರೆ. 2 ನೇ ಪ್ರತಿವಾದಿ ತಂದೆ-ತಾಯಿಗೆ ರಕ್ಷಣೆ ಕೋರಿ ಪೋಲಿಸ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ಪೋಲಿಸರು ಎಲ್ಲರನ್ನು ಕರೆಯಿಸಿ ವಿಚಾರಣೆ ಮಾಡಿ ಬುದ್ಧಿವಾದ ಹೇಳಿರುತ್ತಾರೆ ಎಂದರೆ

ಸರಿಯಲ್ಲ.

10. 2009 ರಲ್ಲಿ ನಾವು ಕುಸುಗಲ್ಲ ಗ್ರಾಮಕ್ಕೆ ಹೋಗಿ ವಾಸ ಮಾಡುತ್ತಿದ್ದೆವು. ನಂತರದಲ್ಲಿ ನಾನು, ತಂಗಿ ಮತ್ತು ತಾಯಿ ಸೇರಿ ಮೃತ 1 ನೇ ಪ್ರತಿವಾದಿಯ ವಿರುದ್ಧ ಕ್ರಿಮಿನಲ್ ಮಿಸಲೆನಿಯಸ್ ಸಂಖ್ಯೆ 43/2009 ದಾಖಲು ಮಾಡಿದ್ದೆವು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಮಗೆ ಜೀವನಾಂಶ ನೀಡಲು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಜೀವನಾಂಶ ಹಣ ಕೊಡದೇ ಇದ್ದಾಗ ನನ್ನ ತಂದೆಯನ್ನು ಇನ್ನೊಂದು ಪ್ರಕರಣದಲ್ಲಿ ಜೈಲಿಗೆ ಕಳುಹಿಸಲಾಗಿತ್ತು ಎಂದರೆ ಸರಿ. ಆದ್ದರಿಂದ ನನ್ನ ತಂದೆ ಅವನ ಪಾಲಿಗೆ ಬಂದ ಆಸ್ತಿಯನ್ನು ವಾಟನಿ ಮಾಡಿ 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟು ರೂ.4 ಲಕ್ಷ ಪಡೆದಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂಗಿಯ ಹೆಸರಿನಲ್ಲಿ ಕುಸುಗಲ್ಲ ಬ್ಯಾಂಕನಲ್ಲಿ ಖಾಯ್ಮು ಠೇವಣಿ ಇಡಲಾಗಿತ್ತು ಎಂದರೆ ಸರಿ. ಸದರಿ ರೂ.4 ಲಕ್ಷ ಹಣದಲ್ಲಿ ಸದರಿ ಠೇವಣಿ ಇಡಲಾಗಿತ್ತು ಎಂದರೆ ಸರಿ. ಸದರಿ ಹಣವನ್ನು ನನ್ನ ಅಜ್ಜಿ ಅವರ ಗಂಡನ ಪಿಂಚಣಿ ಹಣದಿಂದ ಠೇವಣಿ ಇಟ್ಟಿದ್ದರು. ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

11. ದಾವಾ ಅ ಅನುಸೂಚಿ 1 ನೇ ಆಸ್ತಿಯಲ್ಲಿ ಹಳೆ ಮನೆಯನ್ನು ಕೆಡವಿ 2 ನೇ ಪ್ರತಿವಾದಿ ಹೊಸ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಹಿಯನ್ನು ನೋಡಿದರೇ ಗುರುತಿಸಲಾಗುವುದಿಲ್ಲ. ನನ್ನ ತಂದೆ ಜೀವಿತ ಕಾಲದಲ್ಲಿ ಮನೆ ಕಟ್ಟುವ ವಿಚಾರವಾಗಿ ಕರಾರು ಪತ್ರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ, ಸದರಿ ಕರಾರು ಪತ್ರದ ಪ್ರಕಾರ ಮನೆ ಕಟ್ಟಲು ಹಣ ಕೊಟ್ಟರೆ ಅರ್ಧ ಹಿಸ್ಸೆ ಬಿಟ್ಟುಕೊಡುವುದಾಗಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಜೀವನಾಂಶದ

ಹಣ ಪಡೆದು ನನ್ನ ತಂದೆಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕಾಟ ತಡೆಯಲಾರದೇ ನನ್ನ ತಂದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕೊಲೆ ಆಪಾದನೆ ಮಾಡಿ 2 ನೇ ಪ್ರತಿವಾದಿಯವರ ವಿರುದ್ಧ ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು, ತಾಯಿ, ಕುಸುಗಲ್ಲ ಗ್ರಾಮದ ಹಿರಿಯರು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ಮರಣೋತ್ತರ ವರದಿ, ಇನ್ನಿತರ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ನನ್ನ ತಂದೆಯ ಸಾವು ಆತ್ಮಹತ್ಯೆ , 2 ನೇ ಪ್ರತಿವಾದಿ ಕೊಲೆ ಮಾಡಿಲ್ಲ ನಿರ್ದೋಷಿ ಎಂದು ತೀರ್ಪು ನೀಡಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸದರಿ ಪ್ರಕರಣ ಮತ್ತು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.